JULY 25, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- ನೂತನ ಬಹು ಮಹಡಿ ಕಟ್ಟಡಗಳಿಗೆ, ಶೇಕಡ ಒಂದರ ್ಟ 'ಅಗ್ನಿಶಾಮಕ ಕರ'; ಸಚಿವ ಸಂಪುಟ, ನಿರ್ಣಯ.
- ಗದಗ ಜಿಲ್ಲೆಯಲ್ಲಿ, ಕೇಂದ್ರದ ಸಾಮಾಜಿಕ ಭದ್ರತೆಯ, ವಿಮಾ ಯೋಜನೆಗಳ ಬಗ್ಗೆ, ಜನ ಜಾಗ್ರತಿ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಇಂದು ಮತ್ತು ನಾಳೆ, ಸಂಶೋಧನಾ ಸಮ್ಮೇಳನ.
- ರಾವ್ ಬಹಾದ್ದೂರ್, ವಿ.ವೆಂಕಯ್ಯ ಶಾಸನ ತಜ್ಞ ರಾಷ್ಟ್ರೀಯ ಪ್ರಶಸ್ತಿಗೆ, ಧಾರವಾಡದ ಶ್ರೀನಿವಾಸ ಪಾಡಿಗಾರ, ಭಾಜನ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದಲ್ಲಿ ನೂತನವಾಗಿ ನಿರ್ಮಿಸುವ, ಬಹು ಮಹಡಿ ಕಟ್ಟಡಗಳಿಗೆ, ಶೇಕಡ ಒಂದರ ್ಟ 'ಅಗ್ನಿಶಾಮಕ ಕರ', 'ಫಾಯರ್ ಸೆಸ್' ವಿಧಿಸಲು, ರಾಜ್ಯ ಸಚಿವ ಸಂಪುಟ ನಿರ್ಣಯಿಸಿದೆ. ಬೆಂಗಳೂರಿನಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಸಭೆಯ ಬಳಿಕ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ, ಮಾಹಿತಿ ನೀಡಿದರು.

<><><>

**2023–24**ರ ಅವಧಿಯಲ್ಲಿ, ರಾಜ್ಯಾದ್ಯಂತ, **700** ಬಾಲ್ಯ ವಿವಾಹಗಳು ನಡೆದಿರುವ ವರದಿಯಾಗಿದೆ. ಈ ಹಿನ್ನೆಲೆ, ಬಾಲ್ಯ ವಿವಾಹ ನಿ ೀಧ ಕರ್ನಾಟಕ ತಿದ್ದುಪಡಿ ವಿಧೇಯಕ–**2025**ಕ್ಕೆ ಸಂಪುಟ ಅನುಮೋದನೆ ನೀಡಿದೆ. ಆಗಸ್ಟ್ **11** ರಿಂದ ಆರಂಭವಾಗಲಿರುವ ಅಧಿವೇಶನದಲ್ಲಿ, ವಿಧೇಯಕ ಮಂಡನೆಯಾಗಲಿದೆ ಎಂದರು.

<><><>

ಹಾವೇರಿ ಜಿಲ್ಲೆ, ರಟ್ಟಿಹಳ್ಳಿ ತಾಲೂಕು, ಮದಗ–ಮಾಸೂರು ಕೆರೆಯ, ಎಡದಂಡೆ ಹಾಗೂ ಬಲದಂಡೆ ಮುಖ್ಯ ಕಾಲುವೆಗಳ ಆಧುನೀಕರಣ ಕಾಮಗಾರಿಯನ್ನು, 52 ಕೋಟಿ 20 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು, ಸಂಪುಟ ಅನುಮೋದಿಸಿದೆ..

<><><>

ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು, ಯಲ್ಲಮ್ಮನ ಗುಡ್ಡದ ಸಮಗ್ರ ಅಭಿವೃದ್ಧಿಗೆ, 215 ಕೋಟಿ 37 ಲಕ್ಷ ರೂಪಾಯಿ ವೆಚ್ಚದಲ್ಲಿ, ಯೋಜನಾ ವರದಿ ಸಿದ್ಧಪಡಿಸಲು ಹಾಗೂ ಬೆಳಗಾವಿ ಜಿಲ್ಲಾಧಿಕಾರಿಯನ್ನು ಅನುಷ್ಠಾನಾಧಿಕಾರಿಯಾಗಿ ನೇಮಿಸಲು ಸಚಿವ ಸಂಪುಟ ಒಪ್ಪಿಗೆ..

<><><>

ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು, ಯರಗಟ್ಟಿ ಏತ ನೀರಾವರಿ ನವೀಕರಣ ಕಾಮಗಾರಿಗೆ, 25 ಕೋಟಿ ರೂಪಾಯಿ, ರೇಣುಕಾ ಏತ ನೀರಾವರಿ ನವೀಕರಣ ಕಾಮಗಾರಿಗೆ, 20 ಕೋಟಿ ರೂಪಾಯಿ ಅಂದಾಜು ವೆಚ್ಚದ ಕಾಮಗಾರಿಗೆ, ಸಂಪುಟ ಅಸ್ತು..

<><><>

ರಾಯಚೂರಿನ, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆವರಣದಲ್ಲಿ, 50 ಕೋಟಿ ರೂಪಾಯಿ ವೆಚ್ಚದಲ್ಲಿ, ಕಿದ್ವಾಯಿ ಕ್ಯಾನ್ಸರ್ ಚಿಕಿತ್ಸಾ ಘಟಕ ಸ್ಥಾಪನೆಗೆ, ಸಂಪುಟ ಅನುಮೋದನೆ ನೀಡಿದೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

<><><>

ಶ್ರೀ ಸಾಮಾನ್ಯರಿಗೆ, ಸಾಮಾಜಿಕ ಭದ್ರತೆ ಒದಗಿಸುವ, ಕೇಂದ್ರ ಸರ್ಕಾರದ, ಕಡಿಮೆ ವಾರ್ಷಿಕ ಕಂತಿನ, ಪ್ರಧಾನಮಂತ್ರಿ ಜೀವನ್ ಜ್ಯೋತಿ ಸುರಕ್ಷಾ ವಿಮೆ, ಅಟಲ್ ಪಿಂಚಣಿ ಯೋಜನೆ ಮುಂತಾದವುಗಳ ಕುರಿತು, ಗದಗ ಜಿಲ್ಲೆಯ ಗ್ರಾಮ ಪಂಚಾಯ್ತಿಗಳ ಮಟ್ಟದಲ್ಲಿ, ಜನ ಜಾಗ್ರತಿ ಮೂಲಕ, ಪರಿಪೂರ್ಣತೆ ಸಾಧನೆ ಅಭಿಯಾನ ನಡೆಯುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಗದಗ ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ, ಎಂ.ವಿ.ಸಂತೋಷ.

<><><>

ಸಂತೋಷ ಎಂ.ವಿ. ಧ್ವನಿ 50 ಸೆಕೆಂದುಗಳು

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಇಂದು ಮತ್ತು ನಾಳೆ, ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಶೋಧನಾ ಸಮ್ಮೇಳನ ಆಯೋಜಿತವಾಗಿದೆ. ವಿಶ್ವವಿದ್ಯಾಲಯದ, 25 ಸ್ನಾತಕೋತ್ತರ ಅಧ್ಯಯನ ವಿಭಾಗಗಳ, 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು, ತಮ್ಮ ಸಂಶೋಧನಾ ಫಲಿತಾಂಶವನ್ನು, ಸಂಶೋಧಕರು, ಪ್ರಾಧ್ಯಾಪಕರು, ವಿ ’ಯ ಪರಿಣಿತರಿಗೆ, ಮೌಖಿಕ ಹಾಗೂ ಭಿತ್ತಿ ಪತ್ರಗಳ ಮೂಲಕ ಮಂಡಿಸಲಿದ್ದಾರೆ. ಕೃಷಿ ವಲಯದ ಸಮಸ್ಯೆಗಳ ಬಗ್ಗೆಯೂ ಸಹ, ಈ ವಿಚಾರ ಸಂಕಿರಣ ಬೆಳಕು ಚೆಲ್ಲಲಿದೆ. ಇಂದು ಬೆಳಗ್ಗೆ 10 ಗಂಟೆಗೆ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಹೊಸ ದಿಲ್ಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ, ಸಹಾಯಕ ಮಹಾನಿರ್ದೇಶಕಿ, ಸೀಮಾ ಜಗ್ಗಿ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಉಪ ಕುಲಪತಿ ಪಿ.ಎಲ್.ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(1 ನಿ. 4 ಸೆ.)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಣಿ ಚೆನ್ನಭೈರಾದೇವಿ ಅವರ ಸ್ಮರಣಾರ್ಥ, ಅಂಚೆ ಚೀಟಿಯನ್ನು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಹೊಸ ದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ, ಬಿಡುಗಡೆಗೊಳಿಸಿದರು. 'ಮೆಣಸಿನ ರಾಣಿ' ಎಂದೇ ಖ್ಯಾತರಾಗಿದ್ದ' ರಾಣಿ ಚೆನ್ನಭೈರಾದೇವಿ ಅವರು, ಉತ್ತರಕನ್ನಡ ಜಿಲ್ಲೆ, ಹೊನ್ನಾವರ ತಾಲೂಕು, ಗೇರುಸೊಪ್ಪವನ್ನು ಧೈರ್ಯ, ಪರಾಕ್ರಮ ಹಾಗೂ ಚಾಣಾಕ್ಷತೆಯಿಂದ ಆಳಿದ, ರಾಣಿಯಾಗಿದ್ದಾರೆ.

<><><>

ಅಂತಾರಾಷ್ಟ್ರೀಯ ಖ್ಯಾತಿಯ ಶಾಸನ ತಜ್ಞ, ಧಾರವಾಡದ ಪ್ರೊಫೆಸರ್ ಶ್ರೀನಿವಾಸ ಪಾಡಿಗಾರ, ಪ್ರತಿಷ್ಠಿತ ರಾವ್ ಬಹಾದ್ದೂರ್ ವಿ.ವೆಂಕಯ್ಯ ಶಾಸನ ತಜ್ಞ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಭಾರತ ಸರ್ಕಾರದ ಪ್ರಥಮ ಭಾರತೀಯ ಪ್ರಧಾನ ಶಾಸನ ತಜ್ಞ ವಿ.ವೆಂಕಯ್ಯ ಅವರ ಹೆಸರಿನಲ್ಲಿ, ಅವರ ಮರಿಮೊಮ್ಮಗಳು, ಸುನಿತಾ ಮಾಧವನ್, ಚೆನ್ನೈನ ತಮಿಳು ಹೆರಿಟೇಜ್ ಟ್ರಸ್ಟ್‌ನಲ್ಲಿ, ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ನಾಳೆ, ಚೆನ್ನೈನ ಮೈಲಾಪುರದ ಆರ್.ಕೆ. ಕನ್ವೆನ್ಷನ್ ಸೆಂಟರ್‌ನಲ್ಲಿ, ಗಣ್ಯರು ಪ್ರಶಸ್ತಿಯನ್ನು ಪ್ರದಾನಿಸಲಿದ್ದಾರೆ. ಪ್ರೊಫೆಸರ್ ಶ್ರೀನಿವಾಸ ಪಾಡಿಗಾರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರೊ. ಶ್ರೀನಿವಾಸ ಪಾಡಿಗಾರ ಧ್ವನಿ 50 ಸೆಕೆಂದುಗಳು

<><><>

ಉಡುಪಿಯ, ಪರ್ಯಾಯ ಪುತ್ತಿಗೆ ಶ್ರೀ ಕೃಷ್ಣ ಮಠದಿಂದ, ಆಗಸ್ಟ್ 1 ರಿಂದ, ಸೆಪ್ಟೆಂಬರ್ 17ರ ವರೆಗೆ, ಶ್ರೀ ಕೃಷ್ಣ ಜನ್ಮಾಷ್ಟಮಿ ಮಂಡಲೋತ್ಸವ ನಡೆಯಲಿದೆ. ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ, ಉಡುಪಿಯಲ್ಲಿ ಮಾಹಿತಿ ನೀಡಿ, ಮಠದ ರಾಜಾಂಗಣದಲ್ಲಿ ಇಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಚಾಲನೆ ನೀಡಲಿದ್ದಾರೆ; ಅದಮಾರು ಮಠದ ವಿಶ್ವಪ್ರಿಯತೀರ್ಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ, ಗಣ್ಯರು ಪಾಲ್ಗೊಳ್ಳಲಿದ್ದಾರೆ, ಎಂದರು.

<><><>

ಘಟಪ್ರಭಾ ಬಲದಂಡೆ ಕಾಲುವೆಹಾಗೂ ಚಿಕ್ಕೋಡಿ ಬಲದಂಡೆ ಕಾಲುವೆಗಳನ್ನು ನವೀಕರಣಗೊಳಿಸಲು, ಅಂದಾಜು ಸಾವಿರದ 7 ನೂರಾ 22 ಕೋಟಿ ರೂಪಾಯಿ ವೆಚ್ಚದ, ರಾಜ್ಯದ ಯೋಜನಾ ಪ್ರಸ್ತಾವಕ್ಕೆ, ಕೇಂದ್ರ ಶೀಘ್ರ ಅನುಮೋದನೆ ನೀಡಲಿದೆ ಎಂದು, ಕೇಂದ್ರ ಜಲ ಶಕ್ತಿ ಖಾತೆ ಸಚಿವ ಸಿ.ಆರ್.ಪಾಟೀಲ ಭರವಸೆ ನೀಡಿದ್ದಾಗಿ, ಬೆಳಗಾವಿ ಸಂಸದ ಜಗದೀಶ ಶೆಟ್ಟರ ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಸಚಿವರನ್ನು ಭೇಟಿ ಮಾಡಿ, ಚರ್ಚಿಸಿದರು. ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳ, ಲಕ್ಷಾಂತರ ಹೆಕ್ಟರ್ ಕೃಷಿ ಜಮೀನುಗಳಿಗೆ ನೀರು ದೊರೆಯಲಿದೆ ಎಂದು, ಅವರು ಹೇಳಿದ್ದಾರೆ.

<><><>

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಇಂದು ಕಾರವಾರ ಜಿಲ್ಲೆಯಾದ್ಯಂತ ಭಾರಿ ಮಳೆಯಾಗುವ, ಸಾಧ್ಯತೆ ಇದೆ. ಆರೇಂಜ್ ಅಲರ್ಟ್ ಘೋಷಿಸಲಾಗಿದ್ದು, ಸಾರ್ವಜನಿಕರು ಮುಂಜಾಗ್ರತೆ ವಹಿಸುವಂತೆ, ಉತ್ತರಕನ್ನಡ ಜಿಲ್ಲಾಡಳಿತ ಸೂಚಿಸಿದೆ. ಕಳೆದ 24 ಗಂಟೆಗಳಲ್ಲಿ, ಭಟ್ಕಳದಲ್ಲಿ ಅತೀ ಹೆಚ್ಚು 122 ಮಿಲ್ಲಿ ಮೀಟರ್, ಕಾರವಾರದಲ್ಲಿ 120, ಹೊನ್ನಾವರದಲ್ಲಿ 112 ಹಾಗೂ ಜಿಲ್ಲೆಯಾದ್ಯಂತ ಒಟ್ಟು 109 ಮಿಲ್ಲಿ ಮೀಟರ್ ಮಳೆಯಾಗಿದೆ.

<><><>

ಕೊಡಗು ಜಿಲ್ಲೆಯಾದ್ಯಂತ ಸತತ ಮಳೆ ಹಿನ್ನೆಲೆ, ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ, ಇಂದು ಜಿಲ್ಲಾಧಿಕಾರಿ ರಜೆ ಘೋಷಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನೂತನ ಬಹು ಮಹಡಿ ಕಟ್ಟಡಗಳಿಗೆ, ಶೇಕಡ ಒಂದರ ್ಟ 'ಅಗ್ನಿಶಾಮಕ ಕರ'; ಸಚಿವ ಸಂಪುಟ, ನಿರ್ಣಯ.
- ಗದಗ ಜಿಲ್ಲೆಯಲ್ಲಿ, ಕೇಂದ್ರದ ಸಾಮಾಜಿಕ ಭದ್ರತೆಯ, ವಿಮಾ ಯೋಜನೆಗಳ ಬಗ್ಗೆ, ಜನ ಜಾಗ್ರತಿ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಇಂದು ಮತ್ತು ನಾಳೆ, ಸಂಶೋಧನಾ ಸಮ್ಮೇಳನ.
- ರಾವ್ ಬಹಾದ್ದೂರ್, ವಿ.ವೆಂಕಯ್ಯ ಶಾಸನ ತಜ್ಞ ರಾಷ್ಟ್ರೀಯ ಪ್ರಶಸ್ತಿಗೆ, ಧಾರವಾಡದ ಶ್ರೀನಿವಾಸ ಪಾಡಿಗಾರ, ಭಾಜನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>